ಆ) ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನಿಟ್ಟೂರು ಬ್ಯಾರೇಜ್‌ನಿಂದ ಔರಾದ್ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ ಸರಬರಾಜು ಯೋಜನೆಗಾಗಿ ಪ್ರಾಥಮಿಕ ಹಂತದ ಸರ್ವೇ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ

ಇ) ವಿಸ್ತೃತ ಸರ್ವೇ ಕಾಮಗಾರಿಯನ್ನು ಕೈಗೊಳ್ಳಲು ರೂ 4 00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವನ್ನು ಮಂಡಳಿಗೆ ಭರಣಾ ಮಾಡಲು ಪಟ್ಟಣ ಪಂಚಾಯತ್ ಔರಾದ್ ಇವರಿಗೆ ಕೋರಲಾಗಿದೆ

ಈ) ಪಟ್ಟಣ ಪಂಚಾಯತಿಯ ಹಣ ಭರಣ ಮಾಡಿದ ಕೂಡಲೇ ವಿಸ್ತೃತ ಸರ್ವೇ ಕಾಮಗಾರಿಯನ್ನು ಕೈಗೊಳ್ಳಲಾಗುವುದು

1445 (2087) ಶ್ರೀ ಹಾಲಪ್ಪ ಹೆಚ್ (ಹೊಸನಗರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ದಿನಗೂಲಿ ನೌಕರರ ಸಂಖ್ಯೆ ಎಷ್ಟು, (ತಾಲ್ಲೂಕಾವಾರು ವಿವರ ನೀಡುವುದು)

ಆ) ಸದರಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆಯೇ,

ಇ) ಎಷ್ಟು ದಿನದ ಒಳಗಾಗಿ ದಿನಗೂಲಿ ನೌಕರರನ್ನು ಖಾಯಂ ಗೊಳಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ) –

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 8307–11/83 ರಲ್ಲಿ ದಿನಾಂಕ 23–02–1990 ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್‌ಎಲ್‌ಸಿ 90 ದಿನಾಂಕ 6–08–1990 ನ್ನು ಹೊರಡಿಸಲಾಗಿದ್ದು ಸದರಿ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1–07–1984 ರಂದು ಅಥವಾ ಅದಕ್ಕಿಂತ ಹಿಂದೆ ತೊಡಗಿಸಲಾದ ಸಾಂದರ್ಭಿಕ/ ದಿನಗೂಲಿ ಆಧಾರದ ಮೇಲೆ ಮಾಡಿರುವ ಎಲ್ಲಾ ನೇಮಕಾತಿಗಳು

ಸ್ವಯಂಚಾಲಿತವಾಗಿ ರದ್ದಾಗುವುದೆಂದು ಆದೇಶಿಸಲಾಗಿತ್ತು ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದರಿಂದ ಇವರುಗಳ ಸೇವೆಯನ್ನು ಮುಂದುವರೆಸಲಾಗಿದೆ

ಇ) ದಿನಾಂಕ 1-07-84 ರ ನೇಮಕಾತಿ ಹೊಂದಿರುವ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ಕರ್ನಾಟಕ ಉಚ್ಛ ನ್ಯಾಯಾಲಯದ ವಿಭಾಗೀಯ ಪೀಠವು ರಿಟ್ ಮೇಲ್ಮನವಿ ಸಂಖ್ಯೆ 120 ಮತ್ತು 12-329/1999 ರಲ್ಲಿ ದಿನಾಂಕ 1-2-2001 ರಂದು ತೀರ್ಪನ್ನು ನೀಡಿತ್ತು ಈ ತೀರ್ಪಿನ ವಿರುದ್ಧ ಕರ್ನಾಟಕ ಸಾಂದರ್ಭಿಕ ಹಾಗೂ ದಿನಗೂಲಿ ನೌಕರರ ಸಂಘ ಹುಬ್ಬಳ್ಳಿಯ ಸರ್ವೋನ್ನತ ನ್ಯಾಯಾಲಯದಲ್ಲಿ ಎಸ್ಎಲ್ಪಿ ಸಂಖ್ಯೆ 3112-3314/2001 ನ್ನು ಸಲ್ಲಿಸಿತ್ತು (ಸಿವಿಕ್ ಅಪೀಲು ಸಂಖ್ಯೆ 1861-2063/2001)

ಮೇಲ್ಕಂಡ ಪ್ರಕರಣದಲ್ಲಿ ಸರ್ವೋಚ್ಛ ನ್ಯಾಯಾಲಯದ ಐದು ನ್ಯಾಯಾಧೀಶರ ಸಂವಿಧಾನ ಪೀಠವು ದಿನಾಂಕ 10-04-2006 ರಂದು ತೀರ್ಪನ್ನು ನೀಡದ್ದು ಸಂಘದ ಸಿವಿಲ್ ಅಪೀಲ್ನ್ನು ವಜಾಗೊಳಿಸಿದೆ ಸಂವಿಧಾನಾತ್ಮಕವಾಗಿ ನಿಗದಿ ಪಡಿಸಿದ ವಿಧಾನದ ಅನುಸಾರ ನೇಮಕಗೊಳ್ಳದ ವ್ಯಕ್ತಿಗಳ ಸೇವೆಯನ್ನು ಸಕ್ರಮಗೊಳಿಸಲು ಅಥವಾ ಅವರ ಸೇವೆಯನ್ನು ಖಾಯಂಗೊಳಿಸಲು ಕ್ರಮಕೈಗೊಳ್ಳಬಾರದೆಂದು ನ್ಯಾಯಾಲಯವು ಆದೇಶಿಸಿದೆ ಆದರೆ ನಿಗದಿತ ನೇಮಕಾತಿ ವಿಧಾನವನ್ನು ಬಹು ಪಾಲು ಪಾಲಿಸಿ ಮಾಡಿದ ನೇಮಕಾತಿಗಳನ್ನು ಒಂದು ಬಾರಿಯ ಕ್ರಮವಾಗಿ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ ಸಕ್ರಮಗೊಳಿಸಬಹುದೆಂದು ಈ ತೀರ್ಪಿನಲ್ಲಿ ಹೇಳಲಾಗಿದೆ ನ್ಯಾಯಾಲಯದ ಈ ತೀರ್ಪಿನ ಪರಿಣಾಮವನ್ನು ಪರಿಶೀಲಿಸಿ ಸಚಿವ ಸಂಪುಟಕ್ಕೆ ಶಿಫಾರಸ್ಸು ನೀಡಲು ದಿನಾಂಕ 27-12-2006 ರಂದು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ ಅದರ ಶಿಫಾರ್ಸ್ನ್ನು ನಿರೀಕ್ಷಿಸಲಾಗಿದೆ

ಅನುಬಂಧ

ಕ್ರಮ ಸಂಖ್ಯೆ	ಇಲಾಖೆ	ದಿನಗೂಲಿ ನೌಕರರ ಸಂಖ್ಯೆ
1	ಲೋಕೋಪಯೋಗಿ ಇಲಾಖೆ, ಶಿವಮೊಗ್ಗ	17
2	ಅರಣ್ಯ ಇಲಾಖೆ, ಶಿವಮೊಗ್ಗ	271
3	ಪಶುಪಾಲನೆ ಇಲಾಖೆ, ಶಿವಮೊಗ್ಗ	12
4	ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಶಿವಮೊಗ್ಗ	1
5	ರೇಷ್ಮೆ ಇಲಾಖೆ, ಶಿವಮೊಗ್ಗ	8
6	ಜಿಲ್ಲಾ ಪಂಚಾಯತಿ, ಶಿವಮೊಗ್ಗ	87
7	ಪ್ರವಾಸೋದ್ಯಮ ಇಲಾಖೆ, ಶಿವಮೊಗ್ಗ	3
8	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಶಿವಮೊಗ್ಗ	59
9	ಸಮಾಜ ಕಲ್ಯಾಣ ಇಲಾಖೆ, ಶಿವಮೊಗ್ಗ	33
10	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಶಿವಮೊಗ್ಗ	9
	ಒಟ್ಟು	**500**